ಒಪ್ಪುತ್ತೇವೆ. Build, operate, transfer ಪದ್ದತಿಯಲ್ಲಿ MDR, State Highways ಏನೇನು ಬರುತ್ತವೆ ಅವನ್ನೆಲ್ಲಾ ಮಾಡುವುದಕ್ಕೆ ನೀವು ಏಕೆ ಆಲೋಚನೆ ಮಾಡಬಾರದು? It is a best thing you can do. ನೀವು ಉಳಿತಾಯವನ್ನೂ ಮಾಡಬಹುದು. You concentrate on village roads. ಗ್ರಾಮೀಣ ರಸ್ತೆಗಳು ಮತ್ತೊಂದು ಅವುಗಳ ಮೇಲೆ concentrate ಮಾಡುವುದು ಉತ್ತಮವೆಂದು ನನಗನ್ನಿಸುತ್ತದೆ.

ಶ್ರೀ ಎ.ಬಿ. ರಮೇಶ್ ಬಂಡಿಸಿದ್ದೇಗೌಡ: ಮಾನ್ಯ ಅಧ್ಯಕ್ಷರೆ, ಅದನ್ನು 4 ಲೈನ್ ಮಾಡಬೇಕೆಂದು ಮಾಡಿದ್ದರು. ಕೊನೇ ಪಕ್ಷ 4 ಲೈನ್ ಮಾಡುವುದಕ್ಕೆ ಆಗದೇ ಇದ್ದರೂ ಕೂಡ ಈಗ ಏನು ರಸ್ತೆ ಇದೆ ಅದನ್ನು ದಯಮಾಡಿ ಉಳಿಸಿಕೊಡಬೇಕೆಂದು ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಸಿ.ಎಂ. ಉದಾಸಿ: ಮಾನ್ಯ ಅಧ್ಯಕ್ಷರೆ, ಮಾನ್ಯ ಬಂಡಿಸಿದ್ದೇಗೌಡರು ಹೇಳಿದ ಮಾತನ್ನು ಗಮನದಲ್ಲಿಟ್ಟುಕೊಂಡು ಅದನ್ನು DPR ಮಾಡಿದ ಕೂಡಲೇ ಮುಂದಿನ ಕ್ರಮ ಕೈಗೊಳ್ಳುತ್ತೇನೆ. ಈಗಾಗಲೇ ನಾವು 450 ಕಿ.ಮೀ. ರಸ್ತೆ ಕಾರ್ಯಗತಗೊಳಿಸುವ ಕೆಲಸ ಮಾಡಿದ್ದೇವೆ. 800 ಕಿ.ಮಿ. DPR ನಡೆಯುತ್ತಿದೆ. PPP ಮಾಡುವುದರಲ್ಲಿ ಇತ್ತೀಚೆಗೆ ಮಧ್ಯದಲ್ಲಿ ಸ್ಲ್ಯಾಬ್ ಆದಾಗ ಜನ ಮುಂದೆ ಬಂದಿರಲಿಲ್ಲ. ಇವತ್ತು ಮುಂದೆ ಬಂದಿದ್ದಾರೆ ಇವತ್ತು 450 ಕಿ.ಮಿ. ಈಗಾಗಲೇ ಪ್ರಾರಂಭವಾಗಿದೆ. ಎಲ್ಲಿ traffic density ಹೆಚ್ಚಿಗೆ ಇದೆ ಅದನ್ನು ಗಮನದಲ್ಲಿಟ್ಟುಕೊಂಡು ಮಾಡುವಂತಹ ಕೆಲಸ ನಾವು ಮಾಡುತ್ತಿದ್ದೇವೆ. ಸುಮಾರು 5000 ಕಿ.ಮಿ. ರಸ್ತೆ ಮಾಡುವಂತಹ ಗುರಿಯನ್ನು ಇಟ್ಟುಕೊಂಡಿದ್ದೇವೆ.

ಕಟ್ಟಡದ ಕಾಮಗಾರಿಗಳು

66 (48) ಶ್ರೀ ರಾಜು ಕೆ. (ರಾಮನಗರ): ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಮನಗರ ಜಿಲ್ಲೆಯಾಗಿ 3 ವರ್ಷ ಕಳೆದಿದ್ದು, ಜಿಲ್ಲಾ ಮಟ್ಟದ ಕಛೇರಿಗಳಾದ ಪೊಲೀಸ್ ಭವನ, ಕಂದಾಯ ಭವನ ಮತ್ತು ಜಿಲ್ಲಾ ಪಂಚಾಯತ್ ಭವನಗಳ ಉದ್ಘಾಟನೆಯನ್ನು ಮಾನ್ಯ ಮುಖ್ಯಮಂತ್ರಿಗಳು ನೆರವೇರಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಆ) ಹಾಗಿದ್ದಲ್ಲಿ, ಮೇಲ್ಕಂಡ ಎಲ್ಲಾ ಭವನಗಳ ಕಟ್ಟಡದ ಕಾಮಗಾರಿಗಳು ಪೂರ್ಣವಾಗಿವೆಯೇ ;

ಇ) ಹಾಗಿಲ್ಲದಿದ್ದಲ್ಲಿ, ಇದುವರೆಗೂ ಪೂರ್ಣಗೊಳ್ಳದಿರಲು ಕಾರಣಗಳೇನು ;

ಈ) ಮೇಲ್ಕಂಡ ಎಲ್ಲಾ ಭವನಗಳ ಕಾಮಗಾರಿಗಳನ್ನು ಯಾವಾಗ ಪೂರ್ಣಗೊಳಿಸಲಾಗುವುದು ?

ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಸಚಿವರು):

ಅ) ರಾಮನಗರ ಪಟ್ಟಣದಲ್ಲಿ ನಿರ್ಮಿಸಿರುವ ಜಿಲ್ಲಾ ಮಟ್ಟದ ಕಛೇರಿಗಳಾದ ಕಂದಾಯ ಭವನ, ಪಂಚಾಯತ್ ಭವನ ಮತ್ತು ಪೊಲೀಸ್ ಭವನ ಕಟ್ಟಡಗಳ ಉದ್ಘಾಟನೆಯನ್ನು ದಿನಾಂಕ: 22.11.2010ರಂದು ಮಾನ್ಯ ಮುಖ್ಯಮಂತ್ರಿಗಳು ಕರ್ನಾಟಕ ಸರ್ಕಾರ ಇವರಿಂದ ನೆರವೇರಿಸಲು ಯೋಜಿಸಲಾಗಿತ್ತು. ಆದರೆ ಮಾನ್ಯ ಮುಖ್ಯಮಂತ್ರಿಗಳ ಇನ್ನಿತರೆ ಕಾರ್ಯಒತ್ತಡದ ಕಾರಣ ಅವರ ಅನುಪಸ್ಥಿತಿಯಲ್ಲಿ ಮಾನ್ಯ ಜಿಲ್ಲಾ ಉಸ್ತುವಾರಿ ಸಚಿವರು ಉದ್ಘಾಟನೆಯನ್ನು ನೆರವೇರಿಸಿರುತ್ತಾರೆ.

ಆ) ಕಂದಾಯ ಭವನ, ಪಂಚಾಯತ್ ಭವನ ಮತ್ತು ಪೊಲೀಸ್ ಭವನ ಕಟ್ಟಡಗಳ ನಿರ್ಮಾಣವನ್ನು ₹ 3300.00 ಲಕ್ಷಗಳ ಅಂದಾಜು ಮೊತ್ತದಲ್ಲಿ ಕೈಗೆತ್ತಿಕೊಂಡಿದ್ದು, ಸಿವಿಲ್ ಕಾಮಗಾರಿಗಳು ಪೂರ್ಣಗೊಳಿಸಲಾಗಿದ್ದು, ಭಾಗಶಃ ವಿದ್ಯುದ್ದೀಕರಣ ಕೆಲಸಗಳು ಬಾಕಿಯಿರುತ್ತವೆ.

ಈ ಕಟ್ಟಡಗಳಿಗೆ ಇದುವರೆಗೂ ₹ 3748.34 ಲಕ್ಷಗಳ ವೆಚ್ಚವಾಗಿರುತ್ತದೆ. ಕರ್ನಾಟಕದ ವಿದ್ಯುಚ್ಛಕ್ತಿ ನಿಗಮಕ್ಕೆ ವಿದ್ಯುತ್ ಸಂಪರ್ಕ ನೀಡುವ ಸಲುವಾಗಿ ಹಣ ಪಾವತಿಸಿದ್ದು, ಮೂರು ಕಟ್ಟಡಗಳಲ್ಲಿ ಟ್ರಾನ್ಸ್‌ಫಾರ್ಮರ್ ಅಳವಡಿಸುವ ಕಾರ್ಯ 2011ರ ಮಾರ್ಚ್ ಅಂತ್ಯಕ್ಕೆ ವಿದ್ಯುತ್ ಸರಬರಾಜನ್ನು ಕಲ್ಪಿಸಲಾಗುವುದು.

ಇ) ಕಾಮಗಾರಿಯನ್ನು ಸ್ಥಳಕ್ಕಗನುಗುಣವಾಗಿ ಸಿದ್ದಪಡಿಸಿದ್ದ ತಾಂತ್ರಿಕ ವಿನ್ಯಾಸ ಹಾಗೂ ಪ್ರಧಾನ ಮುಖ್ಯ ವಾಸ್ತುಶಿಲ್ಪಿಯವರಿಂದ ಅನುಮೋದಿತವಾಗಿದ್ದ ನಕ್ಷೆಯಂತೆ ಹಾಗೂ ಉಪಯೋಗಿತ ಇಲಾಖೆರವರ ಬೇಡಿಕೆಯನುಸಾರ ಕೈಗೆತ್ತಿಕೊಳ್ಳಲಾದ ಪ್ರಯುಕ್ತ ಹಲವು ಐಟಂಗಳು ಮಾರ್ಪಾಡಾಗಿ ಮತ್ತು ಹೆಚ್ಚುವರಿಯಾದ ಕಾರಣ ಯೋಜನಾ ಅವಧಿ ವಿಸ್ತರಣೆಗೊಂಡಿರುತ್ತದೆ. ಇದಲ್ಲದೆ ಮೂಲ ಕಾಮಗಾರಿಯಲ್ಲಿಲ್ಲದ ಒಳಾವರಣದ ವಿಭಜಕಗಳನ್ನು ಅಳವಡಿಸಿಕೊಳ್ಳುವಂತೆ ಉಪಯೋಗಿಸಿ ಇಲಾಖೆಗೆ ತಿಳಿಸಲಾಗಿದೆ.

ಈ) ಮೇಲ್ಕಂಡ ಎಲ್ಲಾ ಕಟ್ಟಡಗಳನ್ನು ಉಳಿಕೆ ವಿದ್ಯುದ್ದೀಕರಣ ಕಾಮಗಾರಿ ಪೂರ್ಣಗೊಳಿಸಿ ಹಾಗೂ ಉಪಯೋಗಿ ಇಲಾಖೆರವರು ಒಳಾವರಣ ವಿಭಜಕಗಳ ಕಾಮಗಾರಿ ಪೂರ್ಣಗೊಳಿಸಿದ ನಂತರ 2011ರ ಏಪ್ರಿಲ್ ಅಂತ್ಯದೊಳಗೆ ಸಾರ್ವಜನಿಕರ ಉಪಯೋಗಕ್ಕಾಗಿ ಬಿಟ್ಟುಕೊಡಲು ಯೋಜಿಸಲಾಗಿದೆ.

ಶ್ರೀ ರಾಜು ಕೆ.: ಮಾನ್ಯ ಅಧ್ಯಕ್ಷರೆ, ಉತ್ತರಗಳನ್ನು ಒದಗಿಸಿದ್ದಾರೆ, ರಾಮನಗರ ಜಿಲ್ಲಾ ಕೇಂದ್ರವಾಗಿ ಮೂರು ವರ್ಷಗಳಾಗಿವೆ. ಅಲ್ಲಿ ಪೋಲಿಸ್ ಭವನ, ಕಂದಾಯ ಭವನ ಮತ್ತು ಪಂಚಾಯತ್ ಭವನ ಈ ಮೂರು ಭವನಗಳನ್ನು ಸನ್ಮಾನ್ಯ ಮುಖ್ಯಮಂತ್ರಿಗಳು 22.11.10ರಂದು ಉದ್ಘಾಟನೆ ಮಾಡಬೇಕಾಗಿತ್ತು. ಅವರ ಕಾರ್ಯ ಒತ್ತಡದಿಂದ ಅವರು ಬಂದಿಲ್ಲ. ಅವರ ಪರವಾಗಿ ಸನ್ಮಾನ್ಯ ಕೃಷಿ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಮಂತ್ರಿಗಳು

ಬಂದು ಉದ್ಘಾಟನೆ ಮಾಡಿದರು. 22.11.2010ರಲ್ಲಿ ಉದ್ಘಾಟನೆ ಮಾಡಿದಂತಹ ಆ ಕಟ್ಟಡ ಇದುವರೆಗೂ ಯಾವುದೇ ಉಪಯೋಗವಿಲ್ಲದೆ, ಅಲ್ಲಿಗೆ ಯಾವುದೇ ಕಛೇರಿಗಳು ಸ್ಥಳಾಂತರ ಆಗದೆ, ಹಾಗೆಯೇ ಇವೆ. ಸುಮಾರು 33 ಕೋಟಿ ರೂ. ಖರ್ಚು ಮಾಡಿ ಕಟ್ಟಿದಂತಹ ಕಟ್ಟಡಕ್ಕೆ ಕೆಲಸ ನಿಧಾನ ಆಗಿದ್ದರಿಂದ 41 ಕೋಟಿ ಅದಕ್ಕಿಂತ ಹೆಚ್ಚಿಗೆ ಹಣ ಖರ್ಚಾಗಿದೆ. ಇಷ್ಟಾದರೂ ಕೂಡ ಇವತ್ತಿನವರೆಗೆ ಅಲ್ಲಿಗೆ ಒಂದು ಕಛೇರಿ ಕೂಡ ಸ್ಥಳಾಂತರವಾಗಲಿಲ್ಲ. ಬಹುಪಾಲು ಸರ್ಕಾರದ ಕಟ್ಟಡಗಳು ಇಲ್ಲದೆ ಈಗಾಗಲೇ ಬಾಡಿಗೆ ಕಟ್ಟಡಗಳಲ್ಲಿ ಕೆಲಸ ನಿರ್ವಹಿಸುತ್ತಿವೆ. ಲಕ್ಷಾಂತರ ರೂಪಾಯಿ ಖರ್ಚು ಮಾಡಿ ಜಿಲ್ಲಾ ಕಟ್ಟಡ ಕಟ್ಟಿ ಉದ್ಘಾಟನೆ ಆದರೂ ಕೂಡ ಉಪಯೋಗವಿಲ್ಲದೆ ಹಣ ಪೋಲಾಗುತ್ತಿದೆ. ದಯಮಾಡಿ ಅದನ್ನು ಮಾಡಿಕೊಡಬೇಕು.

ಅಧ್ಯಕ್ಷರು: ನೀವು ಪ್ರಶ್ನೆ ಕೇಳದೆ ಎಲ್ಲವನ್ನೂ ಹೇಳುತ್ತಾ ಹೋದರೆ ಹೇಗೆ?

ಶ್ರೀ ಕೆ. ರಾಜು: ಈಗಾಗಲೇ ಉದ್ಘಾಟನೆ ಮಾಡಿದಂತಹ ಕಟ್ಟಡಕ್ಕೆ ಇದುವರೆಗೂ ಯಾವುದೇ ಹಣ ಒದಗಿಸಿಲ್ಲ, ದಯಮಾಡಿ ಅದಕ್ಕೆ ಹಣ ಒದಗಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಎರಡನೆಯದಾಗಿ, ಬಜೆಟ್‌ನಲ್ಲಿ ಬೇರೆ ಜಿಲ್ಲೆಗಳಿಗೆ ಹಣವನ್ನು ಒದಗಿಸಿದ್ದಾರೆ, ರಾಮನಗರ ಜಿಲ್ಲೆಗೆ ಒಂದು ರೂಪಾಯಿ ಕೂಡ ಒದಗಿಸಿಲ್ಲ. ದಯಮಾಡಿ ಅದರ ಬಗ್ಗೆಯೂ ಉತ್ತರ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಸಿ.ಎಂ. ಉದಾಸಿ: ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಹೇಳುವಂತಹ ಮೂರು ಕಟ್ಟಡಗಳ ಕೆಲಸ ಸಂಪೂರ್ಣವಾಗಿ ಮುಗಿದಿದೆ. ವಿದ್ಯುತ್ತಿನ ಕೆಲಸದ ಬಾಕಿ ಉಳಿದಿತ್ತು ಮಾರ್ಚ್ 31ರೊಳಗಾಗಿ ಎಲ್ಲಾ ಮುಗಿಯುತ್ತಿದೆ. ಈ ಇಲಾಖೆಗಳಿಗೆ ಸಂಬಂಧಿಸಿದಂತಹ ಕಂದಾಯ, ಪೋಲಿಸ್ ಇಲಾಖೆಯವರು ಮತ್ತು ಪಂಚಾಯತ್ ರಾಜ್ ಇಲಾಖೆಯವರು

ಆ ಕಟ್ಟಡದಲ್ಲಿ ಪಾರ್ಟಿಷನ್ ಮಾಡುವ ಕೆಲಸ ಆ ಇಲಾಖೆಯವರು ಮಾಡಬೇಕಾಗಿರುವಂತಹ ಕೆಲಸ ಅದನ್ನು ಮಾಡಿಕೊಂಡು ಏಪ್ರಿಲ್‌ನಲ್ಲಿ ಪ್ರಾರಂಭ ಮಾಡಬಹುದು ಎನ್ನುವ ಭಾವನೆ ನನಗೆ ಇದೆ. 2009–10ರಲ್ಲಿ 82 ಕೋಟಿ ರೂ. ಮತ್ತು 2010–11ರಲ್ಲಿ 75 ಕೋಟಿ ರೂ. ಇಲ್ಲಿಯವರೆಗೆ LOC ರಾಮನಗರದಲ್ಲಿ ಬಿಡುಗಡೆ ಆಗಿದೆ ಎನ್ನುವ ವಿಚಾರವನ್ನು ಅವರ ಗಮನಕ್ಕೆ ತರುತ್ತಿದ್ದೇನೆ.

ಶ್ರೀ ಕೆ. ರಾಜು: ಮಾನ್ಯ ಅಧ್ಯಕ್ಷರೆ, ಈಗಾಗಲೇ ಜಿಲ್ಲಾ ಮಂತ್ರಿಗಳೂ ಕೂಡ ಪತ್ರ ಬರೆದಿದ್ದಾರೆ. ಹಣ ಕೊಡುವುದಕ್ಕೆ ಏನು ತೊಂದರೆಯಾಗುತ್ತಿದೆ ಎಂದು ಹೇಳಿಲ್ಲ. ಅಲ್ಲಿಯ ಕಟ್ಟಡಕ್ಕೆ ಬೇಕಾದಂತಹ 12 ಕೋಟಿ ರೂ. ಕೊಡಬೇಕೆಂದು ಜಿಲ್ಲಾ ಮಂತ್ರಿಗಳು ಪತ್ರ ಬರೆದಿದ್ದಾರೆ. ಅದಕ್ಕೆ ಉತ್ತರ ಇಲ್ಲ. ಏಪ್ರಿಲ್‌ನಲ್ಲಿ ಯಾವ ಕಾರಣಕ್ಕೂ ಆಗುವುದಿಲ್ಲ. ಇನ್ನು ಮೂರು – ನಾಲ್ಕು ತಿಂಗಳುಗಳಾದರೂ ಆಗುವುದಿಲ್ಲ. ದಯಮಾಡಿ ಅದಕ್ಕೆ ಸರಿಯಾದ ಉತ್ತರ ಕೊಡಬೇಕು. ಹಾರಿಕೆ ಉತ್ತರ ಕೊಟ್ಟರೆ ಏನೂ ಪ್ರಯೋಜನವಾಗುವುದಿಲ್ಲ. ಕಟ್ಟಡ ಕಟ್ಟಿದರೂ ಕೂಡ ಏನೂ ಪ್ರಯೋಜನವಾಗುತ್ತಿಲ್ಲ. ದಯಮಾಡಿ ಮಂತ್ರಿಗಳು ಅದರ ಬಗ್ಗೆ ಸ್ಪಷ್ಟವಾದ ಉತ್ತರ ಕೊಡಬೇಕು.

ಶ್ರೀ ಸಿ.ಎಂ. ಉದಾಸಿ: ಮಾನ್ಯ ಅಧ್ಯಕ್ಷರೆ, ಹಾರಿಕೆ ಉತ್ತರ ಎನ್ನುವ ಪ್ರಶ್ನೆ ಇಲ್ಲಿ ಇಲ್ಲ. ನಾನು ಸ್ಪಷ್ಟವಾಗಿ ಹೇಳಿದ್ದೇನೆ. ಈ ಮಾರ್ಚ್ ತಿಂಗಳ 31ನೇ ತಾರೀಖಿನ ಒಳಗಾಗಿ ಬಾಕಿ ಇರುವ ವಿದ್ಯುತ್ತಿನ ಕೆಲಸ ಮುಗಿಯುತ್ತದೆ. ಅದನ್ನು ಉಪಯೋಗ ಮಾಡಬೇಕಾದಂತಹ ಇಲಾಖೆಯವರು ಪಾರ್ಟಿಷನ್ ಮಾಡಿ ಕೆಲಸ ಮಾಡಬೇಕಾಗಿದೆ. ನಾವು LOC ಕೊಡಬೇಕಾಗಿರುವುದು ಬಾಕಿ 7.5 ಕೋಟಿ ರೂ. ಮಾತ್ರ ಪೆಂಡಿಂಗ್ ಇದೆ. ಮುಂದಿನ ತಿಂಗಳಲ್ಲಿ ಹಣ ಬಿಡುಗಡೆ ಆದ ಕೂಡಲೇ ಬಿಡುಗಡೆ ಮಾಡುವ ಕೆಲಸವನ್ನು ನಾವು

ಮಾಡುತ್ತೇವೆ. ಈಗಾಗಲೇ ಎರಡು ವರ್ಷಗಳಲ್ಲಿ ಬಿಡುಗಡೆ ಮಾಡಿರುವ ಹಣದ ಅಂಕಿ ಅಂಶಗಳನ್ನು ನಾನು ಹೇಳಿದ್ದೇನೆ.

ವಿಷಯ: ಮದ್ದೂರು ತಾಲ್ಲೂಕಿಗೆ ಸಬ್ಸಿಡಿ ದರದಲ್ಲಿ ಒದಗಿಸಿರುವ ಕೃಷಿ ಉಪಕರಣಗಳು

67 (49) ಶ್ರೀಮತಿ ಕಲ್ಪನಾ ಸಿದ್ದರಾಜು (ಮದ್ದೂರು): ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮದ್ದೂರು ತಾಲ್ಲೂಕಿಗೆ ಸಬ್ಸಿಡಿ ದರದಲ್ಲಿ ಒದಗಿಸಿರುವ ಕೃಷಿ ಉಪಕರಣ ಹಾಗೂ ಯಂತ್ರೋಪಕರಣಗಳ ಸಂಖ್ಯೆ ಎಷ್ಟು ; ಅವು ಯಾವುವು ; (ಕಳೆದ ಮೂರು ವರ್ಷಗಳ ವಿವರಗಳನ್ನು ನೀಡುವುದು)

ಆ) ಮದ್ದೂರು, ತಾಲ್ಲೂಕಿನ ಎಷ್ಟು ರೈತರಿಗೆ ಸಬ್ಸಿಡಿ ದರದಲ್ಲಿ ಕೃಷಿ ಉಪಕರಣ ಹಾಗೂ ಯಂತ್ರೋಪಕರಣಗಳನ್ನು ವಿತರಿಸಲಾಗಿದೆ ; (ಗ್ರಾಮ, ಹೆಸರು, ವಿಳಾಸ ಸಹಿತ ಪೂರ್ಣ ವಿವರಗಳನ್ನು ಒದಗಿಸುವುದು) ?

ಶ್ರೀ ಉಮೇಶ್ ವಿ. ಕತ್ತಿ (ಕೃಷಿ ಸಚಿವರು):

ಅ) 2008–09, 2009–10 ಹಾಗೂ 2010–11ನೇ ಸಾಲುಗಳಲ್ಲಿ ಮದ್ದೂರು ತಾಲ್ಲೂಕಿಗೆ ಸಬ್ಸಿಡಿ ದರದಲ್ಲಿ ಒದಗಿಸಿರುವ ಕೃಷಿ ಉಪಕರಣ ಹಾಗೂ ಯಂತ್ರೋಪಕರಣಗಳ ವಿವರಗಳನ್ನು ಅನುಬಂಧ–1ರಲ್ಲಿ ನೀಡಲಾಗಿದೆ.

ಆ) ಮದ್ದೂರು ತಾಲ್ಲೂಕಿಗೆ 2008–09 ಮತ್ತು 2009–10ನೇ ಸಾಲುಗಳಲ್ಲಿ ಅನುಕ್ರಮವಾಗಿ 363 ಮತ್ತು 269 ರೈತರಿಗೆ ಕೃಷಿ ಉಪಕರಣ ಹಾಗೂ ಯಂತ್ರೋಪಕರಣಗಳನ್ನು ವಿತರಣೆ ಮಾಡಿದ್ದು, ರೂ. 59.15 ಮತ್ತು ರೂ. 55.68 ಲಕ್ಷ ಸಹಾಯಧನ ಒದಗಿಸಲಾಗಿರುತ್ತದೆ. ಹಾಗೆಯೇ, 2010–11ನೇ ಸಾಲಿನಲ್ಲಿ 516 ರೈತರಿಗೆ ಒದಗಿಸಲಾಗಿದ್ದು, ರೂ. 36.70 ಲಕ್ಷ